(ಅ) ಕೃಷಿ ಕೈಗಾರಿಕೆ ನಿಗಮವು ವಾಣಿಜ್ಯ ಬ್ಯಾಂಕುಗಳಿಂದ ಹಣದ ಸಹಾಯವನ್ನು ಪಡೆದು ರೈತರಿಗೆ ಸಾಲವನ್ನು ಒದಗಿಸಿದೆ. ವಾಣಿಜ್ಯ ಬ್ಯಾಂಕುಗಳು ಬಡ್ಡಿ ದರವನ್ನು ಆಗಾಗ ಏರಿಸಿದ ಕಾರಣ ನಿಗಮವು ಕೂಡಾ ರೈತರೊಡನೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಬಡ್ಡಿ ದರವನ್ನು ಏರಿಸಿದೆ.

(ಇ) ಕೆಲವು ರೈತರು ನಿಗಮದಿಂದ ತೆಗೆದುಕೊಂಡ ಸಾಲದ ಎರಡರಷ್ಟು ಮೊತ್ತವನ್ನು ಕಟ್ಟಿರುವುದು ನಿಜ. ಏಕೆಂದರೆ ಈ ರೈತರು ಸುಮಾರು ೧೨ ರಿಂದ ೧೪ ವರ್ಷಗಳವರೆಗೆ ಅಸಲನ್ನು ಮರು ಪಾವತಿ ಮಾಡಲಿಲ್ಲ. ಟ್ರ್ಯಾಕ್ಟರ್ ಸಾಲಗಳನ್ನು ಬಡ್ಡಿರಹಿತವಾಗಿ ವಸೂಲು ಮಾಡುವಂತಹ ಯಾವ ನಿರ್ಧಾರವನ್ನು ಸರ್ಕಾರ ಇದುವರೆವಿಗೂ ಕೈಗೊಂಡಿಲ್ಲ.

(ಈ) ಸಾಲಗಾರರು ನಿಗದಿತ ಕಾಲದ ಒಳಗೆ ಅಸಲನ್ನು ಹಿಂದಿರುಗಿಸಿದರೆ ಅದರ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತದೆ.

ಶಿರಾದಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಸಾಕಷ್ಟು ಸ್ಥಳಾವಕಾಶವಿಲ್ಲದಿರುವುದು

೧೪೧೨. ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ತುಮಕೂರು ಜಿಲ್ಲೆ ಶಿರಾ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡವಿಲ್ಲದೆ ಸರ್ಕಾರಿ ಪ್ರೌಢಶಾಲೆಯಲ್ಲಿ ಕಾಲೇಜು ನಡೆಯುತ್ತಿದ್ದು ಎರಡಕ್ಕೂ ಸಾಕಷ್ಟು ಸ್ಥಳಾವಕಾಶವಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

(ಆ) ಹಾಗಿದ್ದಲ್ಲಿ ಕಟ್ಟಡ ನಿಧಿಗೋಸ್ಕರ ಸಾರ್ವಜನಿಕರಿಂದ ಕೂಡಿಸಿ ಮೀಸಲಾಗಿಟ್ಟಿರುವ ಸುಮಾರು ಐದು ಲಕ್ಷ ರೂ.ಗಳನ್ನು ಬಳಸಿಕೊಂಡು ನಿಗದಿಯಾಗಿರುವ ನಿವೇಶನದಲ್ಲಿ ಕಟ್ಟಡವನ್ನು ಕಟ್ಟಿಸಲಾಗುವುದೇ.

(ಇ) ಹಾಗಿದ್ದಲ್ಲಿ ಕಟ್ಟಡದ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ.

(ಆ) ದಿನಾಂಕ ೧–೧೨–೧೯೮೪ರಲ್ಲಿ ಶಿರಾ ಖಾಸಗಿ ಕಾಲೇಜನ್ನು ಸರ್ಕಾರಕ್ಕೆ ವಹಿಸಿಕೊಂಡಿರುತ್ತದೆ

(ಇ) ಹಾಲಿ ಇರುವ ಕಾಲೇಜು ಕಟ್ಟಡ ಸರ್ಕಾರದ ವಶಕ್ಕೆ ಬಂದಮೇಲೆ ಕಟ್ಟಡ ನಿರ್ಮಾಣದ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

೧೯೮೫ರವರೆಗೆ ಕಾಲೇಜು ಶಿಕ್ಷಣ ನಿರ್ದೇಶನಾಲಯದ ಉಪ ನಿರ್ದೇಶಕರ ಕಛೇರಿಯಲ್ಲಿ ಲೆಕ್ಕ ಪರಿಶೋಧನೆ ಮುಕ್ತಾಯ

೧೪೧೩ ಶ್ರೀ ಎಸ್. ಎಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕಾಲೇಜು ಶಿಕ್ಷಣ ನಿರ್ದೇಶಕರು ಮತ್ತು ಧಾರವಾಡ ಪ್ರಾದೇಶಿಕ ಕಾಲೇಜು ಶಿಕ್ಷಣ ಉಪ ನಿರ್ದೇಶಕರ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಸಂಖ್ಯೆ ?

(ಆ) ಧಾರವಾಡ ಪ್ರಾದೇಶಿಕ ಕಾಲೇಜು ಶಿಕ್ಷಣ ಉಪ ನಿರ್ದೇಶಕರ ಕಛೇರಿ ವ್ಯಾಪ್ತಿಯಲ್ಲಿ ೧೯೮೩, ೧೯೮೪ ಹಾಗೂ ೧೯೮೫ನೇ ಸಾಲಿನಲ್ಲಿ ಲೆಕ್ಕ ಪತ್ರಗಳ ತನಿಖೆ ಮಾಡಲಾದ ಕಾಲೇಜುಗಳ ಸಂಖ್ಯೆ ಎಷ್ಟು?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ)(೧) ಕಾಲೇಜು ಶಿಕ್ಷಣ ನಿರ್ದೇಶಕರ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳು ೩೬೨